C.R.P.67

Form No.4 (Criminal)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No.129/2025 ಪಿ.ಡಬ್ಲ್ಯೂ-3 ಸಿ.ಡಬ್ಲ್ಯೂ-4

ದಿನಾಂಕಃ- 10.03.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ವಿನುತಾ |
| ಗಂಡನ ಹೆಸರು<br>ತಂದೆಯ ಹೆಸರು | ಮಹದೇವ ಸ್ವಾಮಿ<br>ಶಿವಮಲ್ಲಪ್ಪ |
| ವಯಸ್ಸು | 29 ವರ್ಷ |
| ಉದ್ಯೋಗ | ಗೃಹಿಣಿ |
| ವಾಸ | ಕೆ ಎಂ ದೊಡ್ಡಿ ಗ್ರಾಮ,<br>ಮಳವಳ್ಳಿ ತಾಲ್ಲೂಕು |

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನಾನು PUC ಓದಿದ್ದೇನೆ.

2. ಚಾಸಾ-3 ನೇ ಮಹದೇವಸ್ವಾಮಿ ನನ್ನ ಗಂಡ. ನನ್ನ ತಂದೆಯ ಹೆಸರು ಶಿವಮಲ್ಲಪ್ಪ. ಚಾಸಾ-2 ನೇ ಸುನಂದಮ್ಮ ನನ್ನ ತಾಯಿ. ಚಾಸಾ- 9 ನೇ ವನಿತಾ ನನ್ನ ತಂಗಿ. ಚಾಸಾ-5 ನೇ ರಂಜನ್ ನನ್ನ ತಂಗಿ ವನಿತಾಳ ಗಂಡ.

3. ಈ ಪ್ರಕರಣದ ಆರೋಪಿ ಅಜಯ್ ನನ್ನ ಅಣ್ಣ.

4. ನನ್ನ ತಂದೆ ಬಾಚನಹಳ್ಳಿ ಗ್ರಾಮದಲ್ಲಿ ಮಧ್ಯಪಾನ ಮಾಡಿ ಅನೇಕ ಸಾಲ ಮಾಡಿದ್ದರಿಂದ ನನ್ನ ತಾಯಿ 2025 ಜುಲೈ ತಿಂಗಳಿಂದ 7 ತಿಂಗಳ ಹಿಂದೆ ಬೆಂಗಳೂರಿನಲ್ಲಿ ಗಾರ್ಮೆಂಟ್ಸ್‌ನಲ್ಲಿ ಕೆಲಸಕ್ಕೆ ಸೇರಿಕೊಂಡರು.

5. ಕಳೆದ 4 ವರುಷಗಳಿಂದ ವನಿತಾ ಮತ್ತು ರಂಜನ್ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ.

6. ನನ್ನ ತಾಯಿ ಬೆಂಗಳೂರಿನಲ್ಲಿ ವನಿತಾಳ ಮನೆಯಲ್ಲಿ ಇದ್ದುಕೊಂಡು ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಿರುವ ಸಮಯದಲ್ಲಿ ಶಿವಮಲ್ಲಪ್ಪ ಮತ್ತು ಆರೋಪಿ ಅಜಯ್ ಬಾಚನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದರು.

7. ಇವತ್ತಿಗೆ 7 ತಿಂಗಳ ಹಿಂದೆ ಬಾಚನಹಳ್ಳಿ ಗ್ರಾಮದಲ್ಲಿ ಇರುವ ಮನೆಯಲ್ಲಿ ನನ್ನ ತಂದೆ ಶಿವಮಲ್ಲಪ್ಪ ಮೃತಪಟ್ಟಿದ್ದಾರೆ.

8. ಶಿವಮಲ್ಲಪ್ಪ ಮಧ್ಯಪಾನ ಮಾಡಿದ್ದರಿಂದ ಬಿದ್ದು ಗಾಯಗೊಂಡು ಮೃತಪಟ್ಟಿದ್ದಾರೆ ಎಂದು ಕೇಳಿ ಗೊತ್ತಾಯಿತು.

9. ನಾನು ಪೊಲೀಸರ ಸಮಕ್ಷಮ ದಿಃ29.07.2025 ರಂದು ನಮ್ಮೂರಿನ ರೇವಣ್ಣ ಎಂಬುವರ ತೋಟಕ್ಕೆ ಕೆಲಸಕ್ಕೆ ಹೋಗಿ ................................................................ ರಕ್ತವನ್ನು ತಂದೆಯ ಬಟ್ಟೆಯಲ್ಲಿ ಒರೆಸಿರುವುದಾಗಿ ಹೇಳಿಕೊಂಡನು ಎಂದು ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಪರವಾನಗಿ ಕೊಡಲಾಯಿತು)

<u>ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

1. ನಾನು ದಿಃ 03.09.2025 ರಂದು ಪೊಲೀಸರ ಸಮಕ್ಷಮ ನಿಪಿ-6 ರಲ್ಲಿ ಗುರುತಿಸಿರುವ ದಾಖಲೆಯಲ್ಲಿ ಬರೆದಿರುವಂತೆ ದಿಃ29.07.2025 ರಂದು ನಮ್ಮೂರಿನ ರೇವಣ್ಣ ಎಂಬುವರ ತೋಟಕ್ಕೆ ಕೆಲಸಕ್ಕೆ ಹೋಗಿ ................................................................ ರಕ್ತವನ್ನು ತಂದೆಯ

ಬಟ್ಟೆಯಲ್ಲಿ ಒರೆಸಿರುವುದಾಗಿ ಹೇಳಿಕೊಂಡನು ಎಂದು ಹೇಳಿಕೆ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ.

2. ನಾನು ಈಗ ಆರೋಪಿಗೆ ಸಹಾಯ ಮಾಡಲು ಶಿವಮಲ್ಲಪ್ಪನವರ ಮರಣದ ಕಾರಣದ ಕುರಿತು ಸುಳ್ಳು ಸಾಕ್ಷಿ ಹೇಳಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲುಃ– ಆರೋಪಿ ಪರವಾಗಿ ಶ್ರೀ.ಎಂ.ಬಿ.ಬಸವರಾಜು ವಕೀಲರಿಂದಃ–</u>

ಇಲ್ಲ ಎಂದು ಹೇಳಿದ್ದಾರೆ.

<u>ಮರು ವಿಚಾರಣೆಃ– ಮಾನ್ಯ ಸರ್ಕಾರಿ ಅಭಿಯೋಜಕರಿಂದಃ–</u>

ಇಲ್ಲ ಎಂದು ಹೇಳಿದ್ದಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಸುಬ್ರಮಣ್ಯ.ಜೆ. ಎನ್.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.